Supply of Water to extreme lands of T.-Narasipur and Malavalli Taluk

*Q.—574. Sri T. P. BORAIAH (Bannur).—

Will the Minister for Public Works be pleased to state :—

(a) whether they have made any new arrangement for suppying water to the extreme lands of T-Narsipur and Malavalli Taluks coming under the atchkat of Visvesvaraya Canal ;

(b) if so, the estimated cost of the same and when they would commence the work ?

A.—Sri VEERENDRA PATIL (Minister for Public Works).—

(a) No new arrangement is required.

(b) Does not arise in view of reply to clause (a).

ಶ್ರೀ ಟಿ. ಪಿ. ಬೋರಯ್ಯ.—ಉತ್ತರದಲ್ಲಿ ಹೊಸ ವ್ಯವಸ್ಥೆಯನ್ನೇನೂ ಮಾಡಬೇಕಾಗಿಲ್ಲ ಎಂದು ಹೇಳಿದ್ದೀರಿ. ಈ ನಾಲೆ ಅಚ್ಚುಕಟ್ಟಿನಲ್ಲಿ ಕೊನೆಯಲ್ಲಿರುವ ಅಚ್ಚುಕಟ್ಟುದಾರರಿಗೆ ನೀರು ಸಿಗದೇ ಇರುವುದರಿಂದ ಇವರಿಗೆ ನೀರನ್ನು ಕೊಡಲು ಸರಕಾರ ಏನು ಪ್ರಯತ್ನ ಮಾಡುತ್ತಿದೆ ?

ಶ್ರೀ ವೀರೇಂದ್ರ ಪಾಟೀಲ್.—ನೀರನ್ನು ಕೊಡಲು ಪ್ರಯತ್ನ ಮಾಡುತ್ತಲೇ ಇದ್ದೇವೆ. ಎಲ್ಲೆಲ್ಲ ಈಗ ನೀರು ಟೇಲ್ ಎಂಡ್‌ನಲ್ಲಿ ಬರುತ್ತಿಲ್ಲವೋ, ಅಲ್ಲಿಗೇ ಮೊದಲು ನೀರು ಕೊಟ್ಟು ಆ ನಂತರ ಉಳಿಕೆಯಾದ ಭಾಗಗಳಿಗೆ ಕೊಡಬೇಕೆಂದು ಪ್ರಯತ್ನ ನಡೆದಿದೆ. ಇದರ ಬಗ್ಗೆ ಹೊಸದಾದ ಬೇರೆ ವ್ಯವಸ್ಥೆಯೇನೂ ಬೇಕಾಗಿಲ್ಲ.

ಶ್ರೀ ಜಿ. ಮಾದೇಗೌಡ.—ವಿಶ್ವೇಶ್ವರಯ್ಯ ನಾಲಾ ಕೆಳಗಡೆ ಮಳವಳ್ಳಿ, ಮದ್ದೂರು, ಹಾಗೂ ಟಿ. ನರಸೀಪುರದ ತಾಲ್ಲೂಕುಗಳ ಭಾಗಗಳೆಲ್ಲಾ ಬರುತ್ತವೆ ಮತ್ತು ಇಲ್ಲಿಗೆ ನೀರನ್ನು ಸರಿಯಾಗಿ ಕೊಡಿಸಿಕೊಡಬೇಕೆಂದು ಅನೇಕ ಸಾರಿ ಈ ಸಭೆಯಲ್ಲಿ ಸರಕಾರದ ಗಮನವನ್ನು ಸೆಳೆದಿದ್ದಾಗಿದೆ ಮತ್ತು ಇದಕ್ಕಾಗಿ ಇಲ್ಲಿನ ಅಧಿಕಾರಿಗಳೂ ಕೂಡ ಅನೇಕ ಯೋಜನೆಗಳನ್ನು ಮಾಡಿದ್ದಾರೆ. ಇದರಲ್ಲಿ ಪಿಕ್ ಅಪ್‌ಗಳನ್ನು ತಗೆಯುವುದು, ಬ್ರೀಚ್ ಆಗಿರುವ ಕೆರೆಗಳನ್ನು ರಿಪೇರಿ ಮಾಡುವುದು ಇತ್ಯಾದಿ ಕೆಲವು ಯೋಜನೆಗಳನ್ನು ಮಾಡಿ ಸರಕಾರಕ್ಕೆ ಅದರ ಎಸ್ಟಿಮೇಟುಗಳು ಸಹಾ ಪ್ಲಾನುಗಳನ್ನೆಲ್ಲ ಕಳುಹಿಸಿದ್ದರು. ಇವುಗಳ ಬಗ್ಗೆ ಏನೇನು ಕಾರ್ಯಕ್ರಮ ಕೈಗೊಂಡಿದೆ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರೇ ಸರಕಾರದವರು ಏನೇನು ಮಾಡಿದ್ದಾರೆ ಎನ್ನುವುದನ್ನೆಲ್ಲಾ ಹೇಳಿದ್ದಾರೆ. ನಾವು ಈಗಾಗಲೇ ಎಲ್ಲರಿಗೂ ನೀರು ಕೊಡಿಸುವ ಸಲುವಾಗಿಯೇ ಸುಮಾರು ನೂರು ಟ್ಯಾಂಕುಗಳ ರೆಸ್ಟೊರೇಷನ್ ಕೆಲಸಗಳನ್ನು ಮಾಡಿದ್ದೇವೆ ಮತ್ತು ಈಗಾಗಲೇ ಇದಕ್ಕಾಗಿ ಪ್ಲಾನುಗಳು ಹಾಗೂ ಎಸ್ಟಿಮೇಟುಗಳನ್ನು ತಯಾರು ಮಾಡಲಾಗಿದೆ ಮತ್ತು ಒಂದು ಪ್ರತ್ಯೇಕವಾದ ಸಬ್ ಡಿವಿಜನ್ನನ್ನೂ ಕೂಡ ನೇಮಕ ಮಾಡಲಾಗಿದೆ. ಆ ಸಬ್ ಡಿವಿಜನ್ನಿನವರು ಇದರ ಪ್ಲಾನು ಹಾಗೂ ಎಸ್ಟಿಮೇಟುಗಳನ್ನು ಅವರೇ ನೋಡಿ ತನಿಖೆ ಮಾಡಿ ಎಲ್ಲ ಕೆಲಸಗಳನ್ನೂ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ವಿಶ್ವೇಶ್ವರಯ್ಯ ನಾಲಾದ ಮೇಲು ಭಾಗದಲ್ಲಿ ಸೀಪೇಜ್ ವಾಟರ್‌ದಿಂದ ನೀರಾವರಿಗೆ ಬರತಕ್ಕ ಜಮೀನುಗಳಿಗೆ ತೊಂದರೆಯಾಗಿತೆ. ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಮಾಡಿಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲೆಲ್ಲಿ ಸೀಪೇಜ್ ವಾಟರ್ ಬರುತ್ತದೆ ಎಲ್ಲಿ ಪಿಕ್‌ಅಪ್ ಹಾಕುವುದಕ್ಕೆ ಸಾಧ್ಯ ಇದೆ ಅದನ್ನು ಮಾಡುತ್ತೇವೆ.